ಪಟ್ಟಣ ಪಂಚಾಯಿತಿ, ಬೇಲೂರು ರವರನ್ನು ಎರಡನೇ ಪ್ರತಿವಾದಿಯನ್ನಾಗಿಯೂ ಮಾಡಲಾಗಿದೆ. ದಾಖಲೆ ಪ್ರಕಾರ ವಿವಾದಿತ ಸ್ವತ್ತಿನ ಬಗ್ಗೆ ಬೇಲೂರು ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಓ.ಎಸ್. ನಂ. 25/2005ರಂತೆ ದಾವೆ ನಡೆಯುತ್ತಿರುವುದು ತಿಳಿದು ಬಂದಿರುತ್ತದೆ. ಈ ವಿಚಾರಣೆಯನ್ನು ಸದರಿಯವರು ನ್ಯಾಯಾಲಯದಲ್ಲಿ ದಿ:14/07/2005ಕ್ಕೆ ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ.

ಸದರಿ ಅನಧಿಕೃತ ಕಟ್ಟಡ ಕಟ್ಟುಡುವುದು ಗಮನಕ್ಕೆ ಬಂದ ಕೂಡಲೇ ಕಂದಾಯ ಇಲಾಖೆ, ಪೋಲೀಸ್ ಇಲಾಖೆ ಹಾಗೂ ಪಟ್ಟಣ ಪಂಚಾಯಿತಿ ವತಿಯಿಂದ ಸೂಕ್ತ ಕ್ರಮ ವಹಿಸಿದ್ದು, ಸದರಿ ಕಟ್ಟಡದ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿದೆ. ಹಾಗೂ ಅನಧಿಕೃತ ಕಟ್ಟಡ ಕಟ್ಟುತ್ತಿರುವ ಸ್ಥಳವನ್ನು ಸರ್ವೆ ಮಾಡಿಸಿ, ಕಾನೂನು ರೀತಿ ಕಟ್ಟು ನಿಟ್ಟಿನ ಕ್ರಮ ಜರುಗಿಸಲಾಗುವುದು.

ಉಪಾಧ್ಯಕ್ಷರು: ರಘುಪತಿ ಭಟ್, ಅವರು ಇಲ್ಲ: ಸಿಎಸ್. ನಾಡಗೌಡ್ರು ಅವರು ಇಲ್ಲ ಯಡಿಯೂರಪ್ಪನವರು.

ಶ್ರೀ ಬಿ.ಎಸ್.ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಗಂಭೀರವಾದಂಥ ವಿಚಾರ. ಇದು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವ ವಿಷಯವೇ ಅಲ್ಲ. ಪತ್ರಿಕೆಗಳಲ್ಲಿ ಬಂದಿದ್ದರಿಂದ ನನ್ನ ಗಮನಕ್ಕೆ ಬಂದಿದ್ದರಿಂದ ನಾನು ಇವತ್ತು ಪ್ರಸ್ತಾಪಿಸುತ್ತಿದ್ದೇನೆ. ಸೋಮವಾರ ಬೆಳಗಿನ ಜಾವ ಕೇಂದ್ರ ಸರ್ಕಾರದ ಗೃಹ ಇಲಾಖೆಯವರು ಸೋಮವಾರ ಮಧ್ಯರಾತ್ರಿ ರಾಜ್ಯದ ಮುಖ್ಯ ಕಾರ್ಯದರ್ಶಿಗೆ ಒಂದು ಮೆಸೇಜ್ ನ್ನು ತಿಳಿಸಿ, ಇವತ್ತು ಭಯೋತ್ಪಾದಕರ ದಾಳಿಗೆ ವಿಧಾನ ಸೌಧ ತುತ್ತಾಗುವಂಥ ಸಾಧ್ಯತೆಗಳು ಇರುವುದರಿಂದ ಕಟ್ಟೆಚ್ಚರಿಕೆ ವಹಿಸಬೇಕೆನ್ನುವ ಒಂದು ಆದೇಶ ಸೂಚನೆ ಬಂದಿದೆ ಎನ್ನುವಂಥ ಆತಂಕ ತರುವಂಥ ಸಂಗತಿ, ಇದನ್ನು ನಾನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದೆ. ಪತ್ರಿಕೆಗಳಲ್ಲಿ ಕೂಡ ಬಂದಿದೆ. ಈ ಹಿನ್ನೆಲೆಯಲ್ಲಿ ನಾನು ಈ ಹಿಂದೆ ರಾಜ್ಯದ ಬೇಹುಗಾರಿಕೆ ಇಲಾಖೆಯವರು, ವಿಧಾನಸೌಧ ಮೇಲೆ ದಾಳಿ ಮಾಡುವಂಥ ಸಂಭವ ಇದೆ ಎಂದು ಮೊದಲೇ ಸರ್ಕಾರಕ್ಕೂ ತಿಳಿಸಿದ್ದರು ಎನ್ನುವಂಥ ಮಾಹಿತಿಗಳು ನನ್ನ ಹತ್ತಿರ ಇವೆ. ಇಂಥ ಒಂದು ವಿಶೇಷವಾದ ಸಂದರ್ಭದಲ್ಲಿ ಸರ್ಕಾರ ಈ ಒಂದು ವಿಧಾನ ಸೌಧದ ರಕ್ಷಣೆಯ ದೃಷ್ಟಿಯಿಂದ, ಇಲ್ಲಿ ನಾಡಿನ ಜನಪ್ರತಿನಿಧಿಗಳು ಮತ್ತು ಕನ್ನಡ ನಾಡಿಗೆ ಬಹಳ ಹೆಮ್ಮೆ ತರುವಂಥ ಕಟ್ಟಡವನ್ನು ಉಳಿಸಿಕೊಳ್ಳಬೇಕಾಗಿದೆ. ಮತ್ತು ಯಾವುದೇ ರೀತಿಯ ಆತಂಕ ಇಲ್ಲದೆ ಇಲ್ಲಿ ಅಧಿಕಾರಿಗಳು ಹಾಗೂ ನೌಕರರು ಕೆಲಸ ಮಾಡಬೇಕಾಗುತ್ತದೆ. ಇಂಥ ಒಂದು ಗಂಭೀರವಾದ ವಿಷಯದ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಏಕೆಂದರೆ, ಏನು ಭಯ ಎಂದರೆ,

ಸುಮಾರು ಹತ್ತಾರು ಸಾವಿರ ಜನ ಬಾಂಗ್ಲಾದೇಶ ಹಾಗೂ ಇತರೆ ಬೇರೆ ದೇಶಗಳಿಂದ ಕಾನೂನು ಬಾಹಿರವಾಗಿ ಇಲ್ಲಿ ನೆಲೆಸಿರುವಂಥದ್ದು, ಮತ್ತೆ ಸಾವಿರಾರು ಭಯೋತ್ಪಾದಕರಿಗೆ ಬೆಂಗಳೂರು ತಂಗುದಾಣವಾಗಿದೆ ಎನ್ನುವಂಥದ್ದು, ಮಾಜಿ ಪ್ರಧಾನಿ ದಿ. ರಾಜೀವ್ ಗಾಂಧಿಯವರನ್ನು ಹತ್ಯೆ ಮಾಡಿದಂಥ ಜನ ಕೋಣನಕುಂಟೆಯಲ್ಲಿ ಇದ್ದಂಥದ್ದು. ಈ ರೀತಿ ಅನೇಕ ವಿಷಯಗಳು ತಮಗೆಲ್ಲ ಗೊತ್ತಿರುವಂಥ ಸಂಗತಿ. ನಿತ್ಯ ಓಡಾಟ ಮಾಡುವುದೇ ಕಷ್ಟವಾಗಿರುವಂಥ ಈ ಸಂದರ್ಭದಲ್ಲಿ ಈ ರೀತಿಯಾದಂಥ ಭಯೋತ್ಪಾದಕತೆ ಜಾಸ್ತಿಯಾಗತಕ್ಕಂತ ಸಂದರ್ಭದಲ್ಲಿ, ಮತ್ತೆ ನಾನು ಹತ್ತಾರು ಬಾರಿ ಪ್ರಸ್ತಾಪ ಮಾಡಿರುವಂತೆ ಭೂಗತ ದೊರೆ ದಾವೂದ್ ಇಬ್ರಾಹಿಂ ಜೊತೆಗೆ ಸಂಬಂಧ ಇರುವಂಥ ಜನ ಇಲ್ಲಿದ್ದಾರೆ ಎನ್ನುವುದನ್ನು ಕೋರ್ಟು ಮುಂದೆ ಸ್ವತಃ ಕರೀಂಲಾಲ ಹಾಜರಿದ್ದ ಸಂದರ್ಭದಲ್ಲಿ ನಮೂದಿಸಿರುವುದರಿಂದ, ಈ ರೀತಿ ಭಯಾನಕ ವಾತಾವರಣ ಇರುವಂಥ ಸಂದರ್ಭದಲ್ಲಿ ಏನಾದರೂ ಅನಾಹುತವಾಗುವುದಕ್ಕಿಂತ ಮುಂಚೆ ನಮ್ಮ ಪೋಲೀಸ್ ಇಲಾಖೆ, ರಕ್ಷಣೆ ಇಲಾಖೆ ಇತರೆಯವರು ಇದೆಲ್ಲವನ್ನು ಎದುರಿಸತಕ್ಕಂಥ ಶಕ್ತಿ ಇದೆ. ಮೊನ್ನೆ ಅಯೋಧ್ಯೆಯಲ್ಲಿ ಆರಂಭ ಘಟನೆಯಲ್ಲಿ ತಮ್ಮ ಪ್ರಾಣದ ಹಂಗು ತೊರೆದು ಅದನ್ನು ಉಳಿಸಿಕೊಂಡರು. ಪಾರ್ಲಿಮೆಂಟಿನ ಮೇಲೆ ಘಟನೆ ನಡೆದಂಥ ಸಂದರ್ಭದಲ್ಲಿ ಅವರು ಉಳಿಸಿಕೊಂಡು, ಆದರೆ ಆ ರೀತಿ ಘಟನೆಗಳೇ ಆಗದ ರೀತಿಯಲ್ಲಿ ಈಗಿರುವಂಥ ನಮ್ಮ ಏನು ವ್ಯವಸ್ಥೆಗಳಿವೆ, ಭದ್ರತೆಗಳು ಇವೆ. ಇವೂ ಏನೇನು ಸಾಲದು. ಯಾರು ಬೇಕಾದರೂ ವಿಧಾನ ಸೌಧಕ್ಕೆ ಬಂದು ಹೋಗಬಹುದು, ಏನು ಬೇಕಾದರೂ ಮಾಡಬಹುದು ಎನ್ನುವ ಆತಂಕದ ವಾತಾವರಣ ಇರುವುದರಿಂದ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡು, ಯಾವುದೇ ಕಾರಣಕ್ಕೂ ಈ ರೀತಿ ಯಾವುದೇ ವ್ಯಕ್ತಿ ಒಳಗೆ ನುಸುಳದಂತೆ ಭದ್ರತೆಯ ದೃಷ್ಟಿಯಿಂದ ಏನಾದರೂ ವಿಶೇಷವಾದಂಥ ಚಿಂತನೆ ಮಾಡಿದಿರಾ? ಕಾರ್ಯಕ್ರಮ ರೂಪಿಸಿದಿರಾ? ನಾವು ಈ ರಾಜ್ಯದ ಜನತೆಗೇ ಈ ಮನೆಯ ಮೂಲಕ ಬೆಂಗಳೂರಿನಲ್ಲಿ ಈ ರೀತಿ ಭಯೋತ್ಪಾದಕರಿಗೆ ಅವಕಾಶ ಕೊಡುವುದಿಲ್ಲ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಕಾನೂನು ಬಾಹಿರವಾಗಿ ಅದು ಬಾಂಗ್ಲದೇಶದವರಿರಬಹುದು ಅಥವಾ ಪಾಕಿಸ್ತಾನದಲ್ಲಿ ಈ ರೀತಿ ಭಯೋತ್ಪಾದನೆಗೆ ಪ್ರೇರಣೆ ಪಡೆದು ತಯಾರಿ ನಡೆಸಿಕೊಂಡು ತರಬೇತಿ ಪಡೆದು ಇಲ್ಲಿ ಬಂದಂಥವರು ಇರಬಹುದು. ಹತ್ತಾರು ಉದಾಹರಣೆಗಳು ಇವೆ. ಬೆಂಗಳೂರು, ಹುಬ್ಬಳ್ಳಿ, ಕಾರವಾರ ಈ ಸೂಕ್ಷ್ಮ ಪ್ರದೇಶಗಳಲ್ಲಿ ಈ ರೀತಿಯ ಚಟುವಟಿಕೆಗಳು ನಿತ್ಯ ನಡೆಯುವಂಥದ್ದು ನಮ್ಮ ಗಮನಕ್ಕೆ ಬಂದಿರುವುದರಿಂದ, ಸರ್ಕಾರ ಇದರ ಬಗ್ಗೆ ಏನಾದರೂ ವಿಶೇಷವಾದಂಥ ಕ್ರಮಗಳನ್ನು ತೆಗೆದು ಕೊಂಡಿದಿರಾ? ಏಕೆಂದರೆ, ಸೋಮವಾರ ಬೆಳಿಗ್ಗೆ ಈ ರೀತಿ ಅದಾಗ ಪತ್ರಿಕೆಗಳಲ್ಲಿ ಈ ವಿಷಯ ಬರುವುದಕ್ಕಿಂತ

ಮುಂಚೆ ನಮ್ಮ ಗೃಹ ಸಚಿವರು ಅಥವಾ ಯಾರಾದರೊಬ್ಬರು ಜವಬ್ದಾರಿಯಿಂದ ಇಲ್ಲಿ ನಿಂತು ಈ ರೀತಿ ವಿಚಾರ ಬಂದಿದೆ ಎಂದು ಸದನದಲ್ಲಿ ತಿಳಿಸಬಹುದಾಗಿತ್ತು.ನನ್ನ ವಿನಂತಿ ಏನೆಂದರೆ, ಸರ್ಕಾರ ಕ್ರಮ ತೆಗೆದುಕೊಳ್ಳುವುದು ಮುಖ್ಯ. ಈ 224 ಜನ ನಾವೇನು ಶಾಸಕರು ಐದು ಕಾಲು ಕೋಟಿ ಜನರ ಪ್ರತಿನಿಧಿಗಳಾಗಿ ನಾವು ಇಲ್ಲಿ ಇದ್ದೇವೆ. ಈ ಮಾಹಿತಿಗಳನ್ನು ಕೊಡುವುದರ ಮೂಲಕ ಶಾಸಕರು ಜಾಗೃತರಾಗಿರಬೇಕು ಮತ್ತೆ ಅವರ ಜೊತೆ ಓಡಾಟ ಮಾಡಬಹುದಾದಂಥ ಅವರ ಹೆಸರಿನಲ್ಲಿ ಸ್ನೇಹಿತರು ಬರಬಹುದು, ಯಾರೋ ಹೋಗಬಹುದು, ಈ ರೀತಿ ವಿಚಿತ್ರವಾದ ಸಂದರ್ಭ ಇರುವುದರಿಂದ ನಾವು ಬಿಗಿ ಕ್ರಮವನ್ನು ತೆಗೆದುಕೊಂಡಿದ್ದೇವೆ. ವಿಧಾನಸೌಧದಲ್ಲಿ ಅ ಇತಿಮಿತಿಗಳು ಬಿಟ್ಟು ಬೇರೆ ಆ ಗುರುತು ಇಲ್ಲದವರು ಬೇರೆ ಯಾರೂ ಪ್ರವೇಶ ಆಗಕೂಡದು, ಈ ರೀತಿ ಶಾಸಕರ ಸಲಹೆಯನ್ನು ತೆಗೆದುಕೊಂಡು ಈ ರೀತಿ ಗಂಭೀರವಾದ ವಿಷಯದ ಬಗ್ಗೆ ಸಮಗ್ರವಾಗಿ ಚಿಂತನೆ ಚರ್ಚೆ ಆಗಬೇಕಾಗಿತ್ತು ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಈಗಾಗಲೇ ಸರ್ಕಾರ ನಿಮ್ಮ ಕರ್ತವ್ಯ ಮಾಡಿಲ್ಲವೆಂದು ನಾನು ಹೇಳುತ್ತಿಲ್ಲ. ಆ ದೃಷ್ಟಿಯಿಂದ ಈಗಿರುವ ಭದ್ರತೆ ಏನೇನು ಸಾಲದು ಆದ್ದರಿಂದ, ನಿರ್ದಿಷ್ಟವಾಗಿ ತಮ್ಮಿಂದ ನಮಗೆ ಏನು ಉತ್ತರ ಬೇಕು ಎಂದರೆ, ಈ ಮಾಹಿತಿ ನಿಜನಾ? ಗೃಹ ಇಲಾಖಾಧಿಕಾರಿಗಳೊಂದಿಗೆ ಇದರ ಬಗ್ಗೆ ಚರ್ಚೆ ಏನಾದರೂ ಆಗಿದೆಯೇ? ಈ ಮನೆಯಿಂದ, ಆ ರೀತಿ ಆಗುವುದಕ್ಕೆ ಯಾವುದೇ ಸಂದರ್ಭದಲ್ಲಿ ಅವಕಾಶ ಕೊಡುವುದಿಲ್ಲ ಎನ್ನುವಂಥ ಭದ್ರತೆ ದೃಷ್ಟಿಯಿಂದ ಏನು ಕ್ರಮ ತೆಗೆದುಕೊಂಡಿದ್ದೀರೆಂದು ನಾನು ಕೇಳಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಉಪಾಧ್ಯಕ್ಷರೆ, ಬಹಳ ಗಂಭೀರವಾದಂಥ ಪರಿಸ್ಥಿತಿಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ಬೆಂಗಳೂರು ನಗರ ಭಯೋತ್ಪಾದಕ ನಗರ ಆಗುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ನಾವು ಬಹಳ ಎಚ್ಚರದಿಂದ ಇರಬೇಕಾಗುತ್ತದೆ. ಈ ರಾಜ್ಯ ಒಂದು ಕಾಲದಲ್ಲಿ ಶಾಂತಿಪ್ರಿಯ ರಾಜ್ಯವಾಗಿತ್ತು. ಆದರೆ, ಇವತ್ತು ಅನೇಕ ಕಡೆಯಿಂದ ಜನರು ಇಲ್ಲಿಗೆ ಬರುತ್ತಿದ್ದಾರೆ. ನಿಮಗೆ ಉದಾಹರಣೆ ಹೇಳುವುದಾದರೆ, ಇದೇ ಬೆಂಗಳೂರು ನಗರದಲ್ಲಿರುವ ಕೋಣನ ಕುಂಟೆಯಲ್ಲಿ ರಾಜೀವ್ ಗಾಂಧಿ ಹತ್ಯೆಯಲ್ಲಿ ಇದ್ದಂಥ ಶಿವರಸನ್ ಎಂಬ ವ್ಯಕ್ತಿ ಎರಡು ತಿಂಗಳವರೆಗೆ ಈ ಊರಿನಲ್ಲಿದ್ದರೂ ಕೂಡ ಗುಪ್ತದಳ ಅವರನ್ನು ಪತ್ತೆ ಹಚ್ಚತಕ್ಕಂಥ ಕೆಲಸ ಆಗಲಿಲ್ಲ. ಆದ್ದರಿಂದ, ಒಂದು ಅಂಶವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಒಂದು ಕಡೆ ವಿಧಾನಸೌಧ ಇದೆ ಮತ್ತೊಂದು ಕಡೆ ವಿಕಾಸ ಸೌಧ ಇದೆ. ಇನ್ನೊಂದು ಕಡೆ

ಶಾಸಕರ ಭವನ ಇದೆ. ಮತ್ತೆ ಇಡೀ ಕರ್ನಾಟಕ ರಾಜ್ಯದಲ್ಲಿರುವ ಜಲಾಶಯಗಳು ಇವೆ. ಈ ಒಂದು ದೃಷ್ಟಿಯಿಂದ ಬೆಂಗಳೂರು ಮತ್ತು ಕರ್ನಾಟಕ ರಾಜ್ಯದ ರಕ್ಷಣೆಗೆ ನಿಂತುಕೊಳ್ಳತಕ್ಕಂಥ ವ್ಯವಸ್ಥೆ ಇಲ್ಲಿ ಆಗಬೇಕು. ಸರ್ಕಾರ ಇದನ್ನು ಸಂಪೂರ್ಣವಾಗಿ ಕಡೆಗಣಿಸಿದೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ತೀವ್ರವಾದಂಥ ಎಚ್ಚರ ವಹಿಸಬೇಕು. ಮತ್ತೆ ತೀವ್ರವಾದ ಗಮನ ಹರಿಸಬೇಕು. ಈ ಬಗ್ಗೆ ಸಾಧ್ಯವಾದರೆ ಗೌಪ್ಯವಾಗಿ ಚರ್ಚೆ ನಡೆಸಿ ಸರ್ಕಾರ ಯಾವ ರೀತಿಯಾದ ಕಾರ್ಯಕ್ರಮ ಹಾಕಿಕೊಳ್ಳಬೇಕೆಂಬುದರ ಬಗ್ಗೆ ಸರ್ಕಾರ ಕೆಲಸ ಮಾಡಬೇಕಾಗುತ್ತದೆ. ಏಕೆಂದರೆ ಇವತ್ತಿನ ಬೆಂಗಳೂರಿನ ಪರಿಸ್ಥಿತಿಯಲ್ಲಿ ಬೆಂಗಳೂರು ನಗರಕ್ಕೆ ಯಾರ್ಯಾರು ಬರುತ್ತಾರೆ ಎನ್ನತಕ್ಕಂಥ ಮಾಹಿತಿ ಪೋಲೀಸ್‌ನವರಿಗೆ ಇಲ್ಲವೆಂದು ನಾನು ಹೇಳುತ್ತಿದ್ದೇನೆ. ಇವತ್ತಿನ ದಿವಸ ಬೆಂಗಳೂರು ನಗರ ವಿಶಾಲವಾಗಿ ಬೆಳೆಯುತ್ತಿದೆ. ಎಲ್ಲರೂ ಇಲ್ಲಿಗೆ ಬಂದು ಹೆಚ್ಚಿಗೆ ಬಾಡಿಗೆ ಕೊಟ್ಟು ವಾಸ ಮಾಡುತ್ತಿದ್ದಾರೆ. ಬೆಂಗಳೂರಿಗೆ ಹೊರಗಡೆಯಿಂದ ಯಾರ್ಯಾರು ಬಂದು ಸೇರಿಕೊಳ್ಳುತ್ತಿದ್ದಾರೆ ಎಂಬುದು ಮತ್ತು ಭಯೋತ್ಪಾದಕರು ಬರತಕ್ಕಂಥದರ ಬಗ್ಗೆ ಮತ್ತು ಯಾರ್ಯಾರು ಹೊರಗಡೆಯಿಂದ ಬರುತ್ತಿದ್ದಾರೆಯೋ ಅವರಿಗೆ ಒಂದು ರೀತಿಯಲ್ಲಿ ಎಲ್ಲೋ ಒಂದು ಕಡೆ ತಡೆ ಇಲ್ಲದಂಥ ಪರಿಸ್ಥಿತಿ ಇಲ್ಲಿ ಆಗಿದೆ. ಬೆಂಗಳೂರಿನ ಸಮರ್ಪಕವಾದ ಬೆಳವಣಿಗೆ ದೃಷ್ಟಿಯಿಂದ ಇಲ್ಲಿಗೆ ಬರತಕ್ಕಂಥ ಜನರ ಮತ್ತು ಭಯೋತ್ಪಾದಕರ ದೃಷ್ಟಿಯಿಂದ ಸರ್ಕಾರ ಪ್ರಮುಖವಾಗಿ ಇದರ ಬಗ್ಗೆ ಚಿಂತನೆ ಮಾಡಬೇಕೆಂದು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಬಹಳ ಮಹತ್ವವಾದ ಮತ್ತು ಗಂಭೀರವಾದಂಥ ಸಮಸ್ಯೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಹಿರಿಯ ಸದಸ್ಯರು ಎತ್ತಿದ್ದಾರೆ. ಇದು ನಿಜವಾಗಿಯೂ ಕೂಡ ಆಂತಕಕಾರಿ ಬೆಳವಣಿಗೆ. ನಿಮಗೆಲ್ಲಾ ಗೊತ್ತಿರುವ ಹಾಗೆ ಭಯೋತ್ಪಾದನೆ ಎನ್ನತಕ್ಕಂಥದು 20ನೇ ಶತಮಾನದ ಕೊನೆಯ ದಶಕಗಳಲ್ಲಿ ಬಹಳ ದೊಡ್ಡದಾಗಿ, ತೀವ್ರವಾಗಿ ಮನಕುಲಕ್ಕೆ ಬೆದರಿಕೆಯಾಗುವಂಥ ಮತ್ತು ಒಂದು ವ್ಯವಸ್ಥಿತ ನಾಗರೀಕತೆಗೆ ಅಪಮಾನ ಆಗುವಂತ ರೀತಿಯಲ್ಲಿ ಬೆಳೆದು ಬಂದಿದೆ. ಆವತ್ತಿನದಿವಸ ಭಯೋತ್ಪಾದನೆ ಬೇರೆ ಬೇರೆ ಕಾರಣಗಳಿಂದ ಮತೀಯವಾದ ಅಥವಾ ಆರ್ಥಿಕ ಸಿದ್ಧಾಂತಗಳ ಕಾರಣಗಳಿಂದ ಪ್ರಾರಂಭವಾಗಿರಬಹುದು ಒಟ್ಟಿನಲ್ಲಿ ಇಡೀ ಜಗತ್ತಿನಲ್ಲಿ ಎಂಥದ್ದೆ, ಪ್ರಯತ್ನಗಳನ್ನು ಮಾಡಿದಾಗ್ಯೂ ಕೂಡ ವೈಯಕ್ತಿಕವಾಗಿ, ಸಾಮೂಹಿಕವಾಗಿ ಕೆಲವು ತಪ್ಪು ಅಭಿಪ್ರಾಯಗಳ ಮೂಲಕ ಗುಂಪುಗಳೂ ಭಯೋತ್ಪಾದನೆಯ ಕ್ರಮಗಳನ್ನು ಕೈಗೊಂಡು ಇಡೀ ನಾಗರೀಕ ಸಮಾಜ ತಲ್ಲಣಗೊಳ್ಳುವಂಥ ರೀತಿಯಲ್ಲಿ

ಮಾಡುತ್ತಿದ್ದಾರೆ. ಇತ್ತೀಚೆಗೆ ಲಂಡನ್‌ನಲ್ಲಿ ಆದಂಥ ಪ್ರಕರಣ ತಮಗೆ ಗೊತ್ತಿದೆ. ಮಾನ್ಯ ಉಪಾಧ್ಯಕ್ಷರೆ, ಒಟ್ಟಿನಲ್ಲಿ ನಮ್ಮ ವಿಧಾನಸೌಧಕ್ಕೆ ಇಂಥ ಒಂದು ಬೆದರಿಕೆ ಬಂದಿದೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಈಗ ಪ್ರಸ್ತಾಪ ಮಾಡಿದ್ದಾರೆ. ಇಂಥ ಒಂದು ಮಾಹಿತಿ ನಮಗೆ ಕೇಂದ್ರ ಸರ್ಕಾರದಿಂದ ಬಂದಿದೆ. ಕೇವಲ ವಿಧಾನಸಭೆ ಅಥವಾ ಇಲ್ಲಿಯ ಸ್ಥಳಕ್ಕಿಂತ ಹೆಚ್ಚಾಗಿ ಆರ್ಥಿಕ ಮತ್ತು ಔದ್ಯೋಗಿಕ ಸ್ಥಳಗಳು, ಯಾತ್ರಾ ಸ್ಥಳಗಳು ಮತ್ತು ಇನ್ನು ಇತರೆ ಪವಿತ್ರ ಸ್ಥಳಗಳಿಗೆ ಇಂಥ ಒಂದು ಅಪಾಯ ಇರಬಹುದು. ಎನ್ನುವಂಥ ಸಂಭವನೀಯ ವಿಚಾರಗಳ ಬಗ್ಗೆ ಕೇಂದ್ರ ಸರ್ಕಾರ ನಮಗೆ ಮಾಹಿತಿ ಕೊಟ್ಟಿದೆ. ಇದು ಬಹಳ ಸೂಕ್ಷ್ಮವಾಗಿರತಕ್ಕಂಥ ವಿಚಾರವಾಗಿರುವುದರಿಂದ ಆ ಎಲ್ಲ ವಿವರಗಳನ್ನು ಅಂದರೆ ನಾವು ಏನು ರಚನಾತ್ಮಕ ಕ್ರಮಗಳನ್ನು ಕೈಗೊಂಡಿದ್ದೇವೆ ಎನ್ನತಕ್ಕಂಥ ವಿವರಗಳನ್ನು) ಹೇಳತಕ್ಕಂಥದು ಬಹಳ ಕಷ್ಟ ಮತ್ತೆ ನಾನು ಇವುಗಳನ್ನು ಹೇಳಬಾರದು ಎನ್ನತಕ್ಕಂಥ ಕಾರಣ ಇರುವುದರಿಂದ, ಈಗಾಗಲೇ ಎರಡು ದಿವಸಗಳ ಹಿಂದೆ ಮುಖ್ಯ ಕಾರ್ಯದರ್ಶಿಗಳು ಈ ವಿಚಾರದ ಬಗ್ಗೆ ಸಂಬಂಧಪಟ್ಟಂತ ಎಲ್ಲಾ ಅಧಿಕಾರಿಗಳನ್ನು ಕರೆಸಿ ವಿವರವಾಗಿ ಸಮೀಕ್ಷೆ ಮಾಡಿದ್ದಾರೆ. ಈಗಲೂ ಕೂಡ ಒಂದು ಸಭೆಯನ್ನು ಮುಖ್ಯ ಕಾರ್ಯದರ್ಶಿಯವರು ಮಾಡಿ ಅಧಿಕಾರಿಗಳು ಈಗ ತಾನೆ ಕೆಳಗಡೆ ಬಂದಿದ್ದಾರೆ. ಈ ಸಮಸ್ಯೆಯ ಗಂಭೀರತೆಗೆ ಅನುಗುಣವಾಗುವ ರೀತಿಯಲ್ಲಿ ಕೆಲಸ ಮಾಡಲಿಕ್ಕೆ ವಿಧಾನಸೌಧದ ಈ ಒಂದು ಪ್ರಾಂಗಣಕ್ಕೆ ಮತ್ತು ಇಲ್ಲಿಯ ಪ್ರದೇಶಕ್ಕೆ ಅನುಗುಣವಾಗಿ ಇಲ್ಲಿಯವರೆಗೆ ಏನು ರಕ್ಷಣಾ ಸಿಬ್ಬಂದಿ ಇತ್ತೋ ಅದರ ದುಪ್ಪಟ್ಟು ಸಿಬ್ಬಂದಿಗಳನ್ನು ಈಗ ಹೆಚ್ಚಿಗೆ ಮಾಡಿದ್ದಾರೆ. ಮತ್ತೆ ಹೆಚ್ಚಾಗಿ ದೂರದರ್ಶನ ಅಳವಡಿಸಲಾಗಿದೆ. ಇಲ್ಲಿ ಯಾರ್ಯಾರು ಸಂಶಯಾಸ್ಪದ ರೀತಿಯಲ್ಲಿ ನಡೆಯುತ್ತಿದ್ದಾರೆ ಎನ್ನತಕ್ಕದರ ಬಗ್ಗೆ ಕೂಡ ನೋಡಲಾಗುತ್ತಿದೆ. ಒಟ್ಟಿನಲ್ಲಿ ಆ ವಿಚಾರಗಳನ್ನು, ವಿವರಗಳನ್ನು ಕೊಡತಕ್ಕಂಥ ಅಗತ್ಯತೆ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಹೆಚ್ಚಿನ ವಿವರಗಳು ತಮಗೆ ಬೇಕಾದರೆ ಹೇಳತಕ್ಕಂಥದನ್ನು ಕೂಡ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು)– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಈಗ ಬಂದಿರುವುದರಿಂದ ಅವರ ಗಮನಕ್ಕೆ ಈ ವಿಷಯವನ್ನು ತರುವುದಕ್ಕೆ ಬಯಸುತ್ತೇನೆ. ನಮಗೆ ಈಗಾಗಲೇ ಮಾನ್ಯ ಎಂ.ಪಿ. ಪ್ರಕಾಶ್ ರವರು ಉತ್ತರ ಕೊಡುತ್ತಿದ್ದರು. ಸೋಮವಾರ ಬೆಳಗಿನ ಜಾವ ಕೇಂದ್ರ ಸರ್ಕಾರದಿಂದ ತಮಗೆ ಮೆಸೇಜ್ ಬಂದಿದ್ದು, ಇದರಲ್ಲಿ ಉಗ್ರಗಾಮಿಗಳಿಂದ ವಿಧಾನ ಸೌಧದ ಮೇಲೆ ದಾಳೀ ಆಗಬಹುದು, ಆದ್ದರಿಂದ ಕಟ್ಟೆಚ್ಚರ ವಹಿಸಬೇಕೆಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಒಂದು ರೀತಿಯಲ್ಲಿ ದೇಶ ದ್ರೋಹ ಚಟುವಟಿಕೆಗಳಿಗೆ

ಬೆಂಗಳೂರು ಒಂದು ತಂಗುದಾಣದ ವಾತಾವರಣ ಇಲ್ಲಿದೆ. ಮತ್ತೆ ಇಂಥ ಅನೇಕ ಘಟನೆಗಳು ಇಲ್ಲಿ ನಡೆದಿದೆ. ಆದರೂ ಕೂಡ ನಮ್ಮ ಇಲಾಖಾಧಿಕಾರಿಗಳೂ ಬಹಳ ಕಷ್ಟಪಟ್ಟು ಇಂಥವುಗಳನ್ನು ಪತ್ತೆ ಹಚ್ಚಿ ಸಂಬಂಧಪಟ್ಟವರನ್ನು ಹಿಡಿದಿದ್ದಾರೆ. ಕೋಣನ ಕುಂಟೆಯಲ್ಲಿ ಅವರು ಸುಮಾರು ಎರಡು-ಮೂರು ತಿಂಗಳ ಕಾಲ ಇಲ್ಲಿದ್ದರೂ ಕೂಡ ಅವರ ಮೇಲೆ ಪೂರ್ಣವಾಗಿ ಕ್ರಮ ತೆಗೆದುಕೊಂಡು ಅವರನ್ನು ಮುಗಿಸಿ ರಕ್ಷಣೆ ಕೊಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ನಾನು ತಮ್ಮಲ್ಲಿ ಒತ್ತಾಯ ಮಾಡುವುದೇನೆಂದರೆ, ಈ ರೀತಿಯ ಒಂದು ಸೂಚನೆ ಬಂದ ಮೇಲೆ, ಈಗಾಗಲೇ ನಮ್ಮ ರಾಜ್ಯದ ಗುಪ್ತದಳದವರು ಹಿಂದೆಯೇ ಈ ತರಹದ ವರದಿಗಳನ್ನು ಕೊಟ್ಟಿರಬಹುದು. ಇವತ್ತು ಕೊನೇಪಕ್ಷ ನಮ್ಮ ಪ್ರಮುಖ ಯಾತ್ರಾಸ್ಥಳಗಳು, ಪ್ರಮುಖ ಜಲಾಶಯಗಳಿಗೆ ರಕ್ಷಣೆ ಕೊಡಬೇಕಾಗುತ್ತದೆ. ಇವತ್ತಿನ ದಿವಸ ಕೇವಲ ವಿಧಾನಸೌಧ ಒಂದೇ ಅಲ್ಲ. ಅಂದರೆ ಕೇವಲ ನಮಗೆ ರಕ್ಷಣೆ ಆಗಬೇಕೆಂದು ನಾನು ಹೇಳುತ್ತಿಲ್ಲ. ವಿಧಾನಸೌಧ ಸೇರಿ ನಮ್ಮ ಪ್ರಮುಖ ಯಾತ್ರಾಸ್ಥಳಗಳು ಏನಿವೆ ಅವುಗಳಿಗೆ ಮತ್ತು ನಮ್ಮ ದೊಡ್ಡ ದೊಡ್ಡ ಅಣೆಕಟ್ಟುಗಳಿಗೆ ರಕ್ಷಣೆ ಕೊಡಬೇಕಾಗುತ್ತದೆ. ಏನೋ ಅನಾಹುತ ಆದಮೇಲೆ ಚಿಂತನೆ ಮಾಡತಕ್ಕಂಥದರ ಬದಲು ಮುಂಚೆಯೇ ನಾವು ಜಾಗರೂಕತೆಯಿಂದ ಇರಬೇಕಾಗುತ್ತದೆ. ಲೋಕಸಭೆ ಮೇಲೆ ಆದಂಥ ದಾಳಿಯಲ್ಲಿ ಒಂದು ಕ್ಷಣ ವ್ಯತ್ಯಾಸ ಆಗಿದ್ದರೆ ಏನು ಅನಾಹುತ ಆಗುತ್ತಿತ್ತು ಎನ್ನತಕ್ಕಂಥದು ನಿಮಗೆ ಗೊತ್ತಿದೆ. ಹಾಗೆಯೇ ಅಯೋಧ್ಯೆಯಲ್ಲಿ ಮೊನ್ನೆ ದಿವಸ ನಡೆದಂಥ ಘಟನೆಯಲ್ಲಿ ಎರಡು ನಿಮಿಷ ವ್ಯತ್ಯಾಸವಾಗಿದ್ದರೆ ಇಡೀ ದೇಶದಲ್ಲಿ ಇದ್ದಂಥ ಶಾಂತಿ ವಾತಾವರಣ ಕದಲುವಂಥ, ವ್ಯವಸ್ಥಿತವಾದ ಷಡ್ಯಂತರ ಪ್ರಯತ್ನ ಅಲ್ಲಿ ನಡೆದಿದೆ. ಬೆಂಗಳೂರಿನಲ್ಲಿ ಸುಮಾರು 10 ಸಾವಿರ ಜನರು ಕಾನೂನು ಬಾಹಿರವಾಗಿ ಬಾಂಗ್ಲದೇಶದಿಂದ ಬಂದಿರತಕ್ಕಂಥವರು ಮತ್ತು ಪಾಕಿಸ್ತಾನದಲ್ಲಿ ತರಬೇತಿ ಪಡೆದಿರತಕ್ಕಂಥ ಭಯೋತ್ಪಾದಕರು ಇಲ್ಲಿ ಬಂದು ನೆಲೆಸಿದ್ದಾರೆ ಎಂಬ ಸುದ್ದಿ ಇದೆ. ಈ ರೀತಿಯಾದ ಆತಂಕದ ಕ್ಷಣವನ್ನು ನಾವು ಪ್ರತಿನಿತ್ಯ ಎದುರಿಸುತ್ತಿರುವ ಸಂದರ್ಭದಲ್ಲಿ ತತ್ ಕ್ಷಣ ಈ ಪ್ರಮುಖ ಜಲಾಶಯಗಳೂ ಮತ್ತು ವಿಧಾನ ಸೌಧದ ಪ್ರಮುಖ ಕಟ್ಟಡಗಳಿಗೆ ಮತ್ತು ಪವಿತ್ರ ಯಾತ್ರಾ ಸ್ಥಳಗಳಿಗೆ ರಕ್ಷಣೆ ಮಾಡುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ? ಅಥವಾ ತತ್ ಕ್ಷಣ ಆ ರೀತಿ ಆದೇಶ ಮಾಡುತ್ತೀರಾ? ಇದರ ಬಗ್ಗೆ ಒಂದು ವರದಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ಮೊದಲು ನನಗೆ ಕ್ಷಮಿಸಬೇಕು. ಕಾರಣಾಂತರದಿಂದ ನಾನು ಸ್ವಲ್ಪ ತಡವಾಗಿ ಬಂದಿದ್ದೇನೆ. ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಇತರೆ ಸದಸ್ಯರೂ ಕೂಡ

ಈ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಹಿರಿಯ ಸಚಿವರು ಆದಂಥ ಶ್ರೀಮಾನ್ ಎಂ.ಪಿ. ಪ್ರಕಾಶ್ ರವರು ಪ್ರಸ್ತಾಪ ಮಾಡತಕ್ಕಂಥ ಕಾಲದಲ್ಲಿ ನಾನೂ ಕೂಡ ಇಲ್ಲಿಗೆ ಬಂದೆ. ನಾನು ಇಲ್ಲಿಗೆ ಬರತಕ್ಕಂತ ಕಾಲದಲ್ಲಿ ಪೋಲೀಸ್ ಅಧಿಕಾರಿಗಳು ಈ ಪರಿಸ್ಥಿತಿ ಬಗ್ಗೆ ಹೇಳಿದರು. ಅಯೋಧ್ಯೆಯಲ್ಲಿ ಆದಂಥ ಘಟನೆಗಳ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಗೃಹ ಸಚಿವರಾಗಿರತಕ್ಕಂಥ ಮಾನ್ಯ ಶಿವರಾಜ್ ಪಾಟೀಲ್ ರವರನ್ನು ಸಮಕ್ಷಮ ಭೇಟಿ ಆದಾಗ ಮತ್ತು ದೂರವಾಣಿ ಮುಖಾಂತರ ಮಾಡನಾಡಿದಾಗ ಈ ರೀತಿಯಾದ ಒಂದು ಘಟನೆ ಕರ್ನಾಟಕ ರಾಜ್ಯದಲ್ಲಿ ನಡೆಯಬಹುದು ಎಂದು ಹೇಳಿದರು. ಐಟಿ ಬಿಟಿ ಮತ್ತು ಇತರೆ ಟೆಕ್ನಾಲಜಿ ಇಲ್ಲಿಗೆ ಬಂದ ಮೇಲೆ ಕೆಲವು ಕೇಂದ್ರಗಳ ಮೇಲೆ ಮತ್ತು ಇರಿಗೇಶನ್ ಪ್ರಾಜೆಕ್ಟ್ ಮೇಲೆ ಮತ್ತು ಧಾರ್ಮಿಕ ಪವಿತ್ರ ಸ್ಥಳ ಮತ್ತು ಕರ್ನಾಟಕ ರಾಜ್ಯದಲ್ಲಿರುವ ದೇವಸ್ಥಾನಗಳಿಗೆ ತೀರ್ಥಯಾತ್ರೆಗೆ ಹೋಗತಕ್ಕಂಥ ಜನರಿಗೆ ಮತ್ತು ಸಾರ್ವಜನಿಕರು ಹೋಗತಕ್ಕಂಥ ಸ್ಥಳಗಳ ಮೇಲೆ ಸಾಕಷ್ಟು ನಿಗಾ ವಹಿಸಬೇಕು. ಅಧಿವೇಶನ ನಡೆಯತಕ್ಕಂಥ ಕಾಲದಲ್ಲಿ, ಕೇವಲ ಜನಪ್ರತಿನಿಧಿಗಳಿಗೆ ಹೇಳತಕ್ಕಂಥ ಅರ್ಥದಲ್ಲಿ ನಾನು ಹೇಳುತ್ತಿಲ್ಲ, ಅವರು ಹೇಳಿದ ಹಾಗೆ ಜನ ಪ್ರತಿನಿಧಿಗಳನ್ನು ಒಳಗೊಂಡಂಥ ವಿಧಾನಸಭೆ ಮತ್ತು ವಿಧಾನ ಪರಿಷತ್ ಸಭೆ ಇಲ್ಲಿ ನಡೆಯುತ್ತಿರುವುದರಿಂದ ಇದರ ಬಗ್ಗೆ ಮತ್ತು ವಿಐಪಿಗಳೂ ಇಲ್ಲಿಗೆ ಭೇಟಿ ಕೊಡತಕ್ಕಂಥ ಕಾಲದಲ್ಲಿ ಒಂದು ಎಚ್ಚರ ವಹಿಸಬೇಕೆಂದು ಹೇಳಿದ್ದಾರೆ. ಇವತ್ತು ಲಂಡನ್ ನಲ್ಲಿ ಸಭೆ ನಡೆಯುತ್ತಿದ್ದು, ಅಂತರರಾಷ್ಟ್ರೀಯ ಮಟ್ಟದಿಂದ ಪ್ರಧಾನ ಮಂತ್ರಿಗಳು ಮತ್ತು ರಾಷ್ಟ್ರಪತಿಗಳು ಹೋಗತಕ್ಕಂಥ ಜಾಗದಲ್ಲಿಯೂ ಕೂಡ ಈ ಭಯೋತ್ಪಾದಕರು ಯಾವ ರೀತಿಯಾಗಿ ಒಂದು ಭಯದ ವಾತಾವರಣ ನಿರ್ಮಾಣ ಮಾಡಿರತಕ್ಕಂಥದು ಗೊತ್ತಿದೆ. ರಾಷ್ಟ್ರಮಟ್ಟದಲ್ಲಿ ಅಲ್ಲದೆ ವಿಶ್ವ ಮಟ್ಟದಲ್ಲಿಯೂ ಕೂಡ ಇದು ನಡೆಯುತ್ತಿದೆ. ಮತ್ತೆ ಅಮೇರಿಕಾದಲ್ಲಿ ಟವರ್ ಮೇಲೆ ಬಾಂಬ್ ಹಾಕಿದಂಥ ಘಟನೆಗಳು ಕೂಡ ನಡೆದಿದೆ. ಈ ರೀತಿಯಾದ ಘಟನೆಗಳು ನಿರಂತರವಾಗಿ ಈ ಒಂದು ವ್ಯವಸ್ಥಿತ ರೀತಿಯಲ್ಲಿ ರಾಷ್ಟ್ರಮಟ್ಟದಲ್ಲಿ ಮತ್ತು ಅಂತರರಾಷ್ಟ್ರಮಟ್ಟದಲ್ಲಿ ನಡೆಯುತ್ತಿದೆ. ಅದಕ್ಕಾಗಿ ರಾಜ್ಯ ಸರ್ಕಾರ ಇಂಥ ಒಂದು ಘಟನೆಗಳ ಬಗ್ಗೆ ಎಚ್ಚರ ವಹಿಸಬೇಕೆಂದು ಹೇಳಿದ್ದಾರೆ. ಮೊನ್ನೆ ರಾತ್ರಿ ನಮಗೆ ಮಾಹಿತಿ ಬಂದಿದೆ ಎಂದು ನಮ್ಮ ಪೋಲೀಸ್ ಕಮೀಷನರ್ ರವರು ಈಗಾಗಲೇ ಹೇಳಿದ್ದಾರೆ. ಗುಪ್ತದಳ ಸಂಸ್ಥೆಗಳ ಮಾಹಿತಿ ಪ್ರಕಾರ ಕೆಲವು ಭಯಾತ್ಪಾದಕ ಸಂಸ್ಥೆಗಳು ಆಡಳಿತ ಚುಕ್ಕಾಣಿ ಹಿಡಿದಿರತಕ್ಕಂಥ ಕೇಂದ್ರಗಳ ಮೇಲೆ ಮತ್ತು ಪ್ರಾರ್ಥನಾ ಸ್ಥಳಗಳು ಮತ್ತು ಆರ್ಥಿಕ ಮತ್ತು ರಾಜಕೀಯ ಕೇಂದ್ರಗಳ ಮೇಲೆ ದಾಳಿ ಮಾಡುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಎಚ್ಚರ ವಹಿಸಬೇಕೆಂದು ಹೇಳಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿ, ಸಾರ್ವಜನಿಕರಲ್ಲಿ ಮನಸ್ಸಿನಲ್ಲಿ ಏನೊಂದು ಭಯದ ವಾತಾವರಣ

ಮೂಡುತ್ತಿದೆ ಎಂದು ಹೇಳಿದ್ದಾರೆ. ಇಲ್ಲಿಯವರೆಗೆ ಕೂಡ ಒಂದು ಸೆಕ್ಯುರಿಟಿ ಕೊಡತಕ್ಕಂಥದು ಸರ್ಕಾರದಲ್ಲಿ ಇದೆ. ಈಗಾಗಲೇ ಹೆಚ್ಚು ರಕ್ಷಣೆ ಕೊಟ್ಟಿದ್ದೇವೆ ಮತ್ತು ಅಧಿಕಾರಿಗಳಿಗೂ ಕೂಡ ನಾನು ಹೇಳಿದ್ದೇನೆ. ಇಂಥ ಒಂದು ಜ್ವಲಂತ ಸಮಸ್ಯೆಗಳ ಬಗ್ಗೆ ಸರ್ಕಾರ ನಿಗಾ ವಹಿಸಿ ಕೆಲಸ ಮಾಡತಕ್ಕಂಥ ಎನ್ನತಕ್ಕಂಥ ಮಾತನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ತಾವೆ ಹೇಳಿದಂತೆ ಯಾತ್ರಾಸ್ಥಳಗಳಿಗೆ ದೊಡ್ಡ ದೊಡ್ಡ ಅಣೆಕಟ್ಟುಗಳಿಗೆ ತಕ್ಷಣ ಮಫ್ತಿನಲ್ಲಿಯೋ ಅಥವಾ ಬೇರೆ ರೀತಿನಲ್ಲಿಯೋ ಬಂದೋಬಸ್ತು ಮಾಡುವ ಸಲುವಾಗಿ ನೀವು ಸೂಚನೆಯನ್ನು ಕೊಡುವುದು ಒಳ್ಳೆಯದು. ಇದು ನನ್ನ ಸಲಹೆ ನೀವು ಇದನ್ನು ಆದಷ್ಟು ಬೇಗ ಮಾಡಬೇಕು.

ಶ್ರೀ ಧರ್ಮಸಿಂಗ್: ಸಭೆ ಮಾಡಿ ಚರ್ಚೆ ಮಾಡುತ್ತಿದ್ದೇವೆ. ತಮ್ಮನ್ನು ಕೂಡ ಕರೆದು ಸಭೆ ಮಾಡಬೇಕೆಂದು ಅನ್ನುತ್ತಿದ್ದೀರೇನು? ಬೇಕಾದರೆ ನೋಡಿ ಮಾಡುತ್ತೇವೆ.

ಉಪಾಧ್ಯಕ್ಷರು: ಧರ್ಮೆಗೌಡರೆ,

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಶ್ರೀನಿವಾಸಗೌಡರಿಗೆ ಇಲ್ಲಿ ಕುಳಿತುಕೊಳ್ಳಲು ಹೇಳಿ ಸರಿಯಾಗುತ್ತದೆ.

ಶ್ರೀ ಎಸ್.ಎಲ್. ಧರ್ಮೆಗೌಡ: ಮಾನ್ಯ ಉಪಾಧ್ಯಕ್ಷರೆ, ಅದೇ ವಿಷಯದಲ್ಲಿ ಮಾನ್ಯ ಕುಮಾರಸ್ವಾಮಿಯವರು ಮಾತನಾಡಿದ್ದಾರೆ. ತಾವು ಏನು ಬಿಪಿಎಲ್ ಕಾರ್ಡ್‌ನ್ನು ಕೊಡುವಂಥ ವಿಚಾರದಲ್ಲಿ ಈಗಾಗಲೇ ಬಯಲುಸೀಮೆ ಕಡೆ ಕೊಳವೆಬಾವಿಗಳು ಇದೆ, ಕೊಳವೆಬಾವಿಗಳೂ ಬತ್ತಿ ಹೋಗಿವೆ, ಬಿಪಿಎಲ್ ಕಾರ್ಡ್ ಕೊಡುವುದಿಲ್ಲವೆಂದು ಹೇಳುತ್ತಿದ್ದೀರಿ, ದಯಮಾಡಿ ಅದು ಮತ್ತು ಫೋನಿನ ಬಗ್ಗೆ ಸಡಿಲ ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು: ಮಾನ್ಯ ಧರ್ಮೆಗೌಡರೆ ನಿಮ್ಮ ಸಬ್ಜೆಕ್ಟ್ ಬೇರೆ, ನಿಮ್ಮ ಸಬ್ಜೆಕ್ಟ್ ಅದಲ್ಲ, ನೀವು ಕೊಟ್ಟಿರುವುದೆ ಬೇರೆ ಸಬ್ಜೆಕ್ಟ್, ನೀವು ಇಲ್ಲಿ ಮಾತನಾಡುವುದೇ ಬೇರೆ.

ಶ್ರೀ ಎಂ.ಪಿ. ಪ್ರಕಾಶ್: ಈ ವಿಷಯದ ಬಗ್ಗೆ ಆಗಲೇ ಪ್ರಸ್ತಾಪ ಮಾಡಿದ್ದಾರೆ. 38 ಕುರಿಗಳೂ ಸತ್ತಿದ್ದು 77 ಮನೆಗಳೂ ಬಿದ್ದಿದ್ದು ಅದಕ್ಕೆ ನಾನು ಆಗಲೆ ಉತ್ತರವನ್ನು ಕೊಟ್ಟಿದ್ದೇನೆ. ಅದಕ್ಕೆ ಅವರು ಸಮಾಧಾನವಾಗಿದ್ದಾರೆ. ಆದ್ದರಿಂದ ಅದನ್ನು ತಾವು ಕೈ ಬಿಡಬೇಕು.

ಶ್ರೀ ರೇವುನಾಯಕ್ ಬೆಳಮಗಿ(ಕಮಲಾಪುರ): ಮಾನ್ಯ ಉಪಾಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯಲ್ಲಿ ಭೀಕರ ಬರಗಾಲ ರೈತರ ಸಮಸ್ಯೆ ಮತ್ತು ಕೂಲಿಕಾರರ ಸಮಸ್ಯೆಯ